ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು
**ಸಿ.ಸಿ. ನಂ. 19/2018**

ಸಿ.ಡಬ್ಲ್ಯೂ-**1** ಪಿ.ಡಬ್ಲ್ಯೂ **-1**

ದಿಃ **03.07.2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮೀ |
| ಗಂಡ/ತಂದೆಯ ಹೆಸರು | ಮಲ್ಲೇಶ |
| ವಯಸ್ಸು | ಸುಮಾರು **38** ವರ್ಷ |
| ಕೆಲಸ | ಗೃಹಿಣಿ |
| ವಾಸಸ್ಥಳ | ಮೈಲಾಂಬೂರು ಗ್ರಾಮ |

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ನನ್ನ ಗಂಡ. ಚಾಸಾ-3 ನನ್ನ ಅತ್ತೆ. ಚಾಸಾ-4 ನನ್ನ ತಾಯಿ. ಆರೋಪಿತರು ನಮ್ಮ ಪಕ್ಕದ ಮನೆಯವರು. ಸುಮಾರು 5 ವರ್ಷಗಳ ಹಿಂದೆ ನಾನು ಹಾಗೂ ಚಾಸಾ-2 ರಿಂದ 5 ರವರು ಮನೆಯಲ್ಲಿದ್ದಾಗ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಗುಂಪಾಗಿ ಅಲ್ಲಿಗೆ ಬಂದು, ಮನೆಯ ಮುಂದೆ ಬಂದು ಬೊಳಿ ಮಕ್ಕಳಾ, ಸೂಳೆ ಮಕ್ಕಳಾ, ನಿಮಗೆ ಎಷ್ಟು ಹೇಳಿದರೂ ಕೇಳುತ್ತಿಲ್ಲ, ನಮಗೆ ಅರ್ಧ ಮನೆ ಬಿಡಿ ಎಂದು ಅವಾಚ್ಯವಾಗಿ ನಿಂದಿಸಿದರು. ಆಗ ಚಾಸಾ-2 ರವರು ಬಂದು 60-70 ವರ್ಷಗಳ ಹಿಂದೆ ಕಟ್ಟಿದ ಮನೆ, ಈಗ ಬಂದು ಕೇಳುತ್ತಾ ಇದ್ದೀರಾ ಎಂದಾಗ, 1 ನೇ ಆರೋಪಿಯು ಚಾಸಾ-2 ರವರನ್ನು ತಬ್ಬಿ ಹಿಡಿದು ನೆಲಕ್ಕೆ ಕೆಡವಿದ. 2 ನೇ ಆರೋಪಿ ಚಾಸಾ-2 ರವರ ಬಲತುಟಿಗೆ ಒದ್ದು, ಗಾಯಪಡಿಸಿದ. 3 ಮತ್ತು 4 ನೇ ಆರೋಪಿತರು ಚಾಸಾ-2 ರವರ ಬಲಗಡೆಯ ಕಿಬ್ಬೊಟ್ಟೆಗೆ ತುಳಿದಿರುತ್ತಾರೆ. ಆಗ ಚಾಸಾ-3 ರವರು ಬಿಡಿಸಲು ಮುಂದಾದಾಗ, 1 ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ಬಲಬುಜಕ್ಕೆ ಮತ್ತು ಬಲಭಾಗದ ಹಣೆಗೆ ಹಾಗೂ ಬೆನ್ನಿಗೆ ಹೊಡೆದಿರುತ್ತಾನೆ. ಆಗ ಚಾಸಾ-4 ರವರು

ಜಗಳ ಬಿಡಿಸಲು ಬಂದಾಗ, 1 ನೇ ಆರೋಪಿ ಅದೇ ದೊಣ್ಣೆಯಿಂದ ಎಡಕಾಲಿನ ತೊಡೆಗೆ, ಹೆಬ್ಬೆರಳಿಗೆ ಹಾಗೂ ಎಡಭಾಗದ ಎದೆಗೆ ಹೊಡೆದಿರುತ್ತಾನೆ. ಆಗ ನಾನು ಜಗಳ ಬಿಡಿಸಲು ಹೋದಾಗ 5 ನೇ ಆರೋಪಿ ನನ್ನ ಜುಟ್ಟು ಹಿಡಿದು ಎಳೆದಾಡಿರುತ್ತಾಳೆ. ಚಾಸಾ-5 ಹೊಡೆಯುವುದನ್ನು ನೋಡಿ ಬಿಡಿಸಲು ಬಂದಾಗ 2 ನೇ ಆರೋಪಿ ಇನ್ನೊಂದು ದೊಣ್ಣೆಯಿಂದ ಬಲಗೈ ಬೆರಳುಗಳಿಗೆ ಹೊಡೆದು ಗಾಯಪಡಿಸಿರುತ್ತಾನೆ. ಗಲಾಟೆ ಬಿಡಿಸಲು ಜನ ಬರುತ್ತಿದ್ದಾಗ 1 ನೇ ಆರೋಪಿ ಇವತ್ತಲ್ಲಾ ನಾಳೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು. ನಂತರ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಾಸಾ-2 ರಿಂದ 4 ರವರನ್ನು ಸೇರಿಸಿರುತ್ತೇವೆ. ನಾನು ಆಸ್ಪತ್ರೆಗೆ ದಾಖಲಾಗಿಲ್ಲ, ಚಾಸಾ-5 ರವರಿಗೆ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಆರೋಪಿತರು ನ್ಯಾಯ ಪಂಚಾಯಿತಿ ಮಾಡಬಹುದು ಎಂಬ ಕಾರಣಕ್ಕಾಗಿ, 2 ದಿನಗಳು ತಡೆದು, ಯಾರೂ ಬರದೇ ಇದ್ದುದ್ದರಿಂದ ತಡವಾಗಿ ಹೋಗಿ ದೂರು ಕೊಟ್ಟಿರುತ್ತೇವೆ. ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ದಾಖಲಿಸಿದ ದಿನದಂದೇ ಪೊಲೀಸರು ನಮ್ಮ ಗ್ರಾಮದ ಬಳಿ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಮಧ್ಯಾಹ್ನ 12.00 ರಿಂದ 1.00 ರವರೆಗೆ ಚಾಸಾ-8 ಮತ್ತು 9 ರವರ ಸಮಕ್ಷಮ ಮಹಜರ್ ಕ್ರಮ ಕೈಗೊಂಡು, ಸ್ಥಳದಿಂದ ಎರಡು ದೊಣ್ಣೆಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಗೆ ಮಹಜರ್ ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎರಡು ದೊಣ್ಣೆಗಳನ್ನು ಪೊಲೀಸರು ನಿಪಿ-2 ರಂತೆ

ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು.

ಪ್ರಕರಣದ ಸಂಬಂಧ ಮನೆಯ ಬಳಿಯೇ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನನ್ನ ಹಾಗೂ ಚಾಸಾ-2 ರಿಂದ 5 ರವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್.ಪಿ. ವಕೀಲರಿಂದ</u>**

ಚಾಸಾ-6 ನಿಮ್ಮ ಸಂಬಂಧಿಯಾಗಬೇಕೆಂದರೆ ಸರಿಯಲ್ಲ. ಚಾಸಾ-8 ನನ್ನ ಚಿಕ್ಕ ಮಾವನ ಮಗ. ಚಾಸಾ-7 ಮತ್ತು 9 ನಮ್ಮ ಗ್ರಾಮದವರು. ಚಾಸಾ-6 ರಿಂದ 9 ಎಲ್ಲರೂ ನಿಮ್ಮೊಂದಿಗೆ ಚೆನ್ನಾಗಿ ವಿಶ್ವಾಸದಿಂದ ಇದ್ದಾರೆಂದರೆ ಸರಿ. ಚಾಸಾ-6 ರಿಂದ 9 ರವರ ಮನೆಗಳು ನಿಮ್ಮ ಮನೆಯ ಅಕ್ಕಪಕ್ಕದಲ್ಲಿ ಇಲ್ಲ ಎಂದರೆ ಸರಿ. ನಿಮ್ಮ ಮನೆಯ ಪೂರ್ವದ ದಿಕ್ಕಿಗೆ ಆರೋಪಿತರಿಗೆ ಸೇರಿದ ಮನೆ ಇದೆ ಎಂದರೆ ಸಾಕ್ಷಿ ಶಶಿಕಾಂತ ರವರ ನಿವೇಶನ ಇದೆ ಎಂದು ಹೇಳುತ್ತಾರೆ. ನಮ್ಮ ಮನೆಯ ಬಲಭಾಗಕ್ಕೆ(ದಕ್ಷಿಣ) ಆರೋಪಿತರ ಮನೆ ಇದೆ. ಆರೋಪಿತರ ಮನೆಯ ಬಲಭಾಗಕ್ಕೆ ವಿರಭದ್ರಪ್ಪ ಎನ್ನುವವರ ಮನೆ ಇದೆ ಎಂದರೆ ಸರಿ. ವೀರಭದ್ರಪ್ಪ ರವರ ಮನೆಯ ಪಕ್ಕದಲ್ಲಿ ಮಹಾದೇವೇಗೌಡ ಮತ್ತು ಮಣಿ ಯವರ ಮನೆ ಇದೆ ಎಂದರೆ ಸರಿ. ನಿಮ್ಮ ಮನೆಯಿಂದ 50 ಅಡಿ ದೂರದಲ್ಲಿ ವೃತ್ತ ಇದೆ ಎಂದರೆ ಸಾಕ್ಷಿ ಮೊದಲು ಹೌದು ಎಂದು ಹೇಳಿದ್ದು, ನಂತರ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ವೃತ್ತದಲ್ಲಿ ಬಸವೇಶ್ವರ ದೇವಸ್ಥಾನ, ಉಪಹಾರ ಗೃಹ ಇದೆ ಎಂದರೆ ಸರಿ. ಬೆಳಗ್ಗಿನ ಸಮಯದಲ್ಲಿ ಸದರಿ ಜಾಗ ಜನ ನಿಬಿಡಿತವಾಗಿರುತ್ತದೆಂದರೆ ಸರಿ.

ನಿಮ್ಮ ಮನೆಯ ಮುಂದೆ ಬಿಳಿಗೆರೆ-ಗಾವಡೆಗೆರೆಗೆ ಹೋಗುವ ಮುಖ್ಯ ರಸ್ತೆ ಇದೆ ಎಂದರೆ ಸರಿಯಲ್ಲ. ನಿಮ್ಮ ಮನೆಗೂ ಹಾಗೂ ಆರೋಪಿತರ ಮನೆಗೂ 10-15 ಅಡಿ ಅಂತರ ಇದೆ ಎಂದರೆ ಸರಿಯಲ್ಲ. ನಿಮ್ಮ ಮನೆ ಹಾಗೂ ದಕ್ಷಿಣಕ್ಕೆ ಇರುವ ಜಾಗ ಅಳತೆ

ಮಾಡಲು ನೀವೇನಾದರೂ ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಆರೋಪಿತರು ತಮ್ಮ ಮನೆಯ ಅಳತೆ ಮಾಡಿಸಲು ಅಳತೆಗೆ ಕಟ್ಟಿದ್ದರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆರೋಪಿತರ ಜಾಗವನ್ನು ಎಷ್ಟು ಅಡಿ ಒತ್ತುವರಿ ಮಾಡಿದ್ದೀರಿ ಎಂದು ವರದಿ ಬಂದಿತ್ತು ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಆರೋಪಿತರು 15 ಅಡಿ ಒತ್ತುವರಿಯಾಗಿದೆ ಎಂದು ಕಲ್ಲು ನೆಟ್ಟಿದ್ದರು ಎಂದರೆ ಸಾಕ್ಷಿ ಊಡಾಪೆಯಿಂದ ಜಗಳ ಮಾಡಿಕೊಂಡು ನೆಟ್ಟಿದ್ದರು ಎಂದು ಹೇಳುತ್ತಾರೆ. ಅಳತೆ ಕಾರ್ಯ ಮಾಡಲು ಬಂದಿದ್ದವರು, ಜಾಗ ಗುರುತಿಸಿದ್ದಲ್ಲಿ ಕಲ್ಲನ್ನು ನೆಡಲಾಗಿತ್ತು ಎಂದರೆ ಸಾಕ್ಷಿ ಊಡಾಪೆಯಿಂದ ಜಗಳ ಮಾಡಿಕೊಂಡು ನೆಟ್ಟಿದ್ದರು ಎಂದು ಹೇಳುತ್ತಾರೆ. ಜಗಳವಾಯಿತು ಎಂದು ಹೇಳುವ ಕಾಲಕ್ಕೆ ಎಷ್ಟು ದಿನಗಳ ಹಿಂದೆ ಅಳತೆ ಕಾರ್ಯ ಮಾಡಿ ಕಲ್ಲು ನೆಟ್ಟಿದ್ದರು ಎಂದರೆ ಸಾಕ್ಷಿ 10 ದಿನಗಳು ಎಂದು ಹೇಳುತ್ತಾರೆ. ಆ 10 ದಿನಗಳ ಕಾಲದಲ್ಲಿ ಆರೋಪಿತರು ನಿಮ್ಮೊಂದಿಗೆ ಮಾತನಾಡುವುದು, ನೀವು ಅವರೊಂದಿಗೆ ಮಾತನಾಡುವುದು ಮಾಡಿರಲಿಲ್ಲ ಎಂದರೆ ಸಾಕ್ಷಿ ಮಾಡಿರಲಿಲ್ಲ ಎಂದು ಹೇಳುತ್ತಾರೆ. ಕಲ್ಲು ನೆಟ್ಟು ಎಷ್ಟು ದಿನಗಳಿಗೆ ಆರೋಪಿತರು ಕೇಳಿದರು ಎಂದರೆ ಸಾಕ್ಷಿ ಮಾರನೇ ದಿನವೇ ಕೇಳಿದರು ಎಂದು ಹೇಳುತ್ತಾರೆ. ಕಲ್ಲು ನೆಟ್ಟ 5 ದಿನಗಳ ನಂತರ ಆದ ಮಾತುಕತೆಯ ಜಗಳಕ್ಕೆ ಸಂಬಂಧಿಸಿದಂತೆ ಯಾವುದೇ ದೂರು ದಾಖಲಿಸಿಲ್ಲ ಎಂದರೆ ಸರಿ.

ಜಾಗದ ವಿಚಾರವಾಗಿ ನೀವು ಆರೋಪಿತರ ವಿರುದ್ದ ಸಿವಿಲ್ ಪ್ರಕರಣವಾಗಲೀ, ಅವರು ನಿಮ್ಮ ವಿರುದ್ದ ಸಿವಿಲ್ ಪ್ರಕರಣವನ್ನು ದಾಖಲಿಸಿಲ್ಲ ಎಂದರೆ ಸರಿ. ಆರೋಪಿತರು ಕೂಗಾಡಿದ್ದರು ಎಂದು ಹೇಳಿದ್ದು, ಕೂಗಾಡಿದ್ದರೆ ಅದು ನಿಮ್ಮ ಊರಿನ ವೃತ್ತದ ವರೆಗೂ ಕೇಳುತ್ತದೆ ಎಂದರೆ ಸರಿ. ಸದರಿ ವೃತ್ತದ ಬಳಿ ಇದ್ದಂತಹ ಜನರು ಕೂಗಾಟ ಕೇಳಿ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿ. ನಿಮ್ಮ ಮನೆಯ ದಕ್ಷಿಣ ಭಾಗದಲ್ಲಿರುವಂತಹ ವೀರಭದ್ರಪ್ಪ, ಮಾದೇಗೌಡ ಮತ್ತು ಮಣಿ ಯಾರೂ ಬಂದಿರಲಿಲ್ಲ ಎಂದರೆ ಸರಿ. ಕೂಗಾಟ 8.00 ರಿಂದ 9.00-9.30 ವರೆಗೂ ನಡೆದಿರುತ್ತದೆ. ನಾನು ಆಸ್ಪತ್ರೆಗೆ ಬಂದಿರುತ್ತೇನೆ.

ಆಸ್ಪತ್ರೆಯಲ್ಲಿ ನೀವು ಹಾಗೂ ಚಾಸಾ-2 ರಿಂದ 5 ರವರು ಗಲಾಟೆಯ ಸಂಬಂಧ ವೈದ್ಯರಿಗೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೇಳಿದ್ದೇವೆ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ಸುಮಾರು 15 ದಿನಗಳ ಕಾಲ ಇದ್ದೇವು. ನೀವು ಹಾಗಾ ಚಾಸಾ-2 ರಿಂದ 5 ರವರು ಆಸ್ಪತ್ರೆಯಲ್ಲಿದ್ದಾಗ, ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ಹೇಳಿಕೆ ಪಡೆದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ, ಸಾಕ್ಷಿ ಮುಂದುವರೆದು ಆಸ್ಪತ್ರೆಗೆ ಬರಲೇ ಇಲ್ಲ ಎಂದು ಹೇಳುತ್ತಾರೆ.

ಗಲಾಟೆಯಾಯಿತು ಎಂದು ಹೇಳುವ ಎಷ್ಟು ದಿನಗಳ ನಂತರ ಪೊಲೀಸ್ ಠಾಣೆಗೆ ಹೋದಿರಿ ಎಂದರೆ ಸಾಕ್ಷಿ 3 ದಿನಗಳ ನಂತರ ಎಂದು ಹೇಳುತ್ತಾರೆ. ನಾವು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಸೇರಿರುತ್ತೇವೆ. ಸರ್ಕಾರಿ ಆಸ್ಪತ್ರೆಯಿಂದ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ 1 ಕಿ.ಮೀ ಅಂತರವಿದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

ನಿಪಿ-1 ರಂತೆ ದೂರನ್ನು ಪೊಲೀಸರು ಬರೆದಿರುತ್ತಾರೆ. ನಿಪಿ-1 ನ್ನು ಪೊಲೀಸರು ಠಾಣೆಯಲ್ಲಿ ಬರೆದಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ವಿಚಾರಗಳನ್ನು ಹೇಳಿ, ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ 3 ದಿನಗಳ ಕಾಲ ಪಂಚಾಯಿತಿಗೆ ಬರುತ್ತಾರೆಂದು ಕಾಯ್ದು ನಂತರ ಬಂದು ತಡವಾಗಿ ದೂರು ಕೊಟ್ಟಿರುತ್ತೇನೆಂದು ಹೇಳಿ ಬರೆಸಿರುತ್ತೇನೆ. ಆರೋಪಿತರು ಯಾರೂ ಪಂಚಾಯಿತಿ ಮಾಡಿ ತೀರ್ಮಾನ ಮಾಡಿಕೊಳ್ಳುವುದಾಗಿ ನಿಮ್ಮ ಬಳಿ ಹೇಳಿರಲಿಲ್ಲ ಎಂದರೆ ಸರಿ.

ನಿಪಿ-1 ರಲ್ಲಿ ಸುಮಾರು 60-70 ವರ್ಷಗಳ ಹಿಂದೆ ಕಟ್ಟಿರುವ ಮನೆಯನ್ನು ಈಗ ಬಂದು ಕೇಳುತ್ತಿದ್ದೀರಾ ಎಂದು ಚಾಸಾ-2 ರವರು ಕೇಳಿದರು ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಸುಮಾರು 60-70 ವರ್ಷಗಳ ಹಿಂದೆ ಕಟ್ಟಿರುವ ಮನೆಯನ್ನು ಈಗ ಬಂದು ಕೇಳುತ್ತಿದ್ದೀರಾ ಎಂದು ಚಾಸಾ-2 ರವರು ಕೇಳಿದರು ಎಂದು ಹೇಳಿ ಬರೆಸಿರುತ್ತೇನೆಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಚಾಸಾ-3 ರವರಿಗೆ ಹಣೆಗೆ, ಬೆನ್ನಿಗೆ ಹಾಗೂ ತಲೆಗೆ ಹೊಡೆದ ವಿಚಾರವನ್ನು ನಿಪಿ-1 ರಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಜಗಳ ಬಿಡಿಸಲು ಮುಂದಾದಾಗ ಅವರ ಎಡಗಾಲಿನ ಹೆಬ್ಬೆರಳಿಗೆ ಹಾಗೂ ತೊಡೆಗೆ ಮತ್ತು ಎದೆಗೆ ಹೊಡೆದರು ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದು, ನಿಪಿ-1 ರಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಗಲಾಟೆ ಬಿಡಿಸಲು ಜನ ಬರುತ್ತಿದ್ದಾಗ 1 ನೇ ಆರೋಪಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ, ಅಲ್ಲಿಂದ ಹೋದನು ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದು, ನಿಪಿ-1 ರಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

15 ದಿನಗಳ ಕಾಲ ನೀವು ಆಸ್ಪತ್ರೆಯಲ್ಲಿ ಇದ್ದೀರಿ ಎಂದರೆ ಸರಿ. ಠಾಣೆಯಲ್ಲಿ ಒಂದು ಸಹಿ ಮಾಡಿರುತ್ತೇನೆ. ನಿಪಿ-2 ಕ್ಕೆ ನೀವು ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿ ಮನೆಯ ಬಳಿ ಎಂದು ಹೇಳುತ್ತಾರೆ. ಮಹಜರ್ ಮಾಡುವ ಕಾಲಕ್ಕೆ ನಿಮ್ಮ ಮನೆಯ ಅಕ್ಕ ಪಕ್ಕದವರು ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಚಾಸಾ-8 ಮತ್ತು 9 ರವರನ್ನು ಪೊಲೀಸರು ಹೇಳಿದ ಮೇರೆಗೆ, ನಿವೇ ಕರೆಯಿಸಿ ಸಹಿ ಮಾಡಿಸಿರುತ್ತೀರಾ ಎಂದರೆ ಸರಿ. ನೀವುಗಳು ಘಟನಾ ಸ್ಥಳಕ್ಕೆ ಹೋಗಿ ಎಷ್ಟು ಗಂಟೆಗಳ ನಂತರ ಚಾಸಾ-8 ಮತ್ತು 9 ರವರು ಸ್ಥಳಕ್ಕೆ ಬಂದರು ಸಾಕ್ಷಿ ಅರ್ಧ ಗಂಟೆಯ ನಂತರ ಎಂದು ಹೇಳುತ್ತಾರೆ. ಚಾಸಾ-8 ಮತ್ತು 9 ರವರು ಸ್ಥಳಕ್ಕೆ ಬರುವ ಕಾಲಕ್ಕೆ ಬರವಣಿಗೆ ಬರೆಯಲಾಗಿತ್ತು ಎಂದರೆ ಸಾಕ್ಷಿ ಬರೆಯುತ್ತಿದ್ದರು ಎಂದು ಹೇಳುತ್ತಾರೆ. ನಿಪಿ-2 ಕ್ಕೆ ನೀವು, ಚಾಸಾ-8 ಮತ್ತು 9 ರವರು ಠಾಣೆಯಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2 ಸಾಮಾನ್ಯವಾಗಿ ಎಲ್ಲ ರೈತರ ಮನೆಯಲ್ಲಿರುತ್ತವೆ ಎಂದರೆ ಸರಿ. ಮು.ಮಾ-1 ಮತ್ತು 2 ಠಾಣೆಯಲ್ಲೇ ಇದ್ದವು, ಸ್ಥಳದಲ್ಲಿ ಪೊಲೀಸರಿಗೆ ಯಾರೂ ಮು.ಮಾ-1 ಮತ್ತು 2 ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನವೆಂಬರ್ ತಿಂಗಳಲ್ಲಿ ನೀವು, ಚಾಸಾ-2 ರಿಂದ 5 ರವರು ಗದ್ದೆಗೆ ಗಾಡಿಯಲ್ಲಿ ಊಟ ತೆಗೆದುಕೊಂಡು ಹೋಗುವುದುಂಟು ಎಂದರೆ ಸರಿಯಲ್ಲ. ನೀವು, ಚಾಸಾ-2 ರಿಂದ 5 ರವರು ಗಾಡಿಯಲ್ಲಿ ಹೋಗಬೇಕಾದರೆ ಬಿದ್ದು, ಗಾಯ

ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿತರು ಯಾರೂ ನೀವು ಹೇಳಿದಂತೆ ಬೆಳಿಗ್ಗೆ 8.00 ಗಂಟೆ ಸಮಯಕ್ಕೆ ಜಗಳ ಮಾಡಲು ಬಂದಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ಬಲಬುಜಕ್ಕೆ ಮತ್ತು ಬಲಭಾಗದ ಹಣೆಗೆ ಹಾಗೂ ಬೆನ್ನಿಗೆ ಹೊಡೆದಿರುತ್ತಾನೆ, ಚಾಸಾ-4 ರವರು ಜಗಳ ಬಿಡಿಸಲು ಬಂದಾಗ, 1 ನೇ ಆರೋಪಿ ಅದೇ ದೊಣ್ಣೆಯಿಂದ ಎಡಕಾಲಿನ ತೊಡೆಗೆ, ಹೆಬ್ಬೆರಳಿಗೆ ಹಾಗೂ ಎಡಭಾಗದ ಎದೆಗೆ ಹೊಡೆದಿರುತ್ತಾನೆ, ನಾನು ಜಗಳ ಬಿಡಿಸಲು ಹೋದಾಗ **5** ನೇ ಆರೋಪಿ ನನ್ನ ಜುಟ್ಟು ಹಿಡಿದು ಎಳೆದಾಡಿರುತ್ತಾಳೆ, ಚಾಸಾ-**5** ಹೊಡೆಯುವುದನ್ನು ನೋಡಿ ಬಿಡಿಸಲು ಬಂದಾಗ **2** ನೇ ಆರೋಪಿ ಇನ್ನೊಂದು ದೊಣ್ಣೆಯಿಂದ ಬಲಗೈ ಬೆರಳುಗಳಿಗೆ ಹೊಡೆದು ಗಾಯಪಡಿಸಿರುತ್ತಾನೆಂದು ಸುಳ್ಳಾಗಿ ಹೇಳಿರುತ್ತೀರಾ ಎಂದರೆ ಸರಿಯಲ್ಲ. ಆರೋಪಿತರು ಯಾರೂ ನಿಮ್ಮ ಮೇಲೆ ಹಲ್ಲೆ ಮಾಡಿಲ್ಲದೇ ಇರುವುದರಿಂದ ಅಂದೇ ದೂರು ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹಾಗೂ ಅವರ ಮನೆಯವರ ಮೇಲೆ ದ್ವೇಷದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ನಿಪಿ-**2** ರಂತೆ ಮಹಜರ್ ಜರುಗಿಸಿ, ಮು.ಮಾ-**1** ಮತ್ತು **2** ನ್ನು ಅಮಾನತುಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು